# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 865**

**ಉತ್ತರಿಸಬೇಕಾದ ದಿನಾಂಕ : 20.09.2022**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕ್ ನಿ., ಇವರು ದಿ:01.07.2021 ರಿಂದ ದಿ:31.12.2021 ರಲ್ಲಿ ವಿ.ಎಸ್.ಎಸ್.ಎನ್ ಗಳಿಂದ ಮಹಿಳಾ ಸ್ವಸಹಾಯ ಸಂಘಗಳಿಗೆ ನೀಡಿದ ಸಾಲವೆಷ್ಟು, ಸಾಲಗಳ ಮೇಲೆ ಸರ್ಕಾರದಿಂದ ಹೆಚ್ಚುವರಿಯಾಗಿ ಬಡ್ಡಿ ಕ್ಲೈಂ ಮಾಡಿ ಸರ್ಕಾರದ ಬೊಕ್ಕಸಕ್ಕೆ ನಷ್ಟ ಉಂಟು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ, ಅಂತಹವರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ.</td><td>ಹೌದು, ಹೆಚ್ಚುವರಿಯಾಗಿ ಬಡ್ಡಿ ಕ್ಲೇಮು ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.<br><br>ದಿನಾಂಕ: 01.07.2021 ರಿಂದ ದಿನಾಂಕ: 31.12.2021 ರ ಅವಧಿಯಲ್ಲಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕ್ ನಿ.,ಕೋಲಾರ ಈ ಬ್ಯಾಂಕು ವಿ.ಎಸ್.ಎಸ್.ಎನ್ ಮುಖಾಂತರ ಮಹಿಳಾ ಸ್ವ-ಸಹಾಯ ಸಂಘಗಳಿಗೆ ನೀಡಿದ ಸಾಲಗಳ ವಿವರ ಕೆಳಗಿನಂತಿದೆ.<br><br>
<table>
<tr><th>ಜಿಲ್ಲೆ</th><th>ಸಹಕಾರ ಸಂಘಗಳ ಸಂಖ್ಯೆ</th><th>ಮಹಿಳಾ ಸ್ವ-ಸಹಾಯ ಗುಂಪುಗಳ ಸಂಖ್ಯೆ</th><th>ಮೊತ್ತ (ರೂ.ಲಕ್ಷಗಳಲ್ಲಿ)</th></tr>
<tr><td>ಕೋಲಾರ</td><td>37</td><td>1278</td><td>6184.43</td></tr>
<tr><td>ಚಿಕ್ಕಬಳ್ಳಾಪುರ</td><td>36</td><td>1031</td><td>4888.54</td></tr>
<tr><td>ಒಟ್ಟು</td><td>73</td><td>2309</td><td>11072.97</td></tr>
</table>
<br>2016-17 ರಿಂದ 2020-21 ರ ಅವಧಿಯಲ್ಲಿ ನೀಡಿರುವ ಎಸ್.ಹೆಚ್.ಜಿ ಸಾಲ ವಸೂಲಾತಿ ಹಾಗೂ ವಸೂಲಾತಿ ಆಧಾರದಲ್ಲಿ ಬಡ್ಡಿ ಸಹಾಯಧನದ ಕ್ಲೇಮ್ ಬಿಲ್ಲುಗಳನ್ನು ಸರ್ಕಾರ ಹೊರಡಿಸಿರುವ ನಿಯಮಗಳನ್ವಯ ಕ್ಲೇಮ್ ಮಾಡಿರುವ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕಲಂ 65 ರಡಿ ಪರಿವೀಕ್ಷಣೆಗೆ ಆದೇಶಿಸಲಾಗಿದೆ. ಪರಿವೀಕ್ಷಣೆಯು ಪ್ರಗತಿಯಲ್ಲಿರುತ್ತದೆ.</td></tr>
</table>

| | | |
|---|---|---|
| ಆ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕ್ ನಿ., ಕೆ.ಜಿ.ಎಫ್ ಶಾಖೆಯಲ್ಲಿ 2019-20 ನೇ ಸಾಲಿನ ಪಶು ಭಾಗ್ಯ ಯೋಜನೆಯಡಿಯಲ್ಲಿ ಫಲಾನುಭವಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಹಾಯಧನ ವಿತರಣೆಯಲ್ಲಿ ಅವ್ಯವಹಾರ ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಸರ್ಕಾರ ಯಾವ ಕ್ರಮ ಕೈಗೊಂಡಿದೆ. | ಬ್ಯಾಂಕಿನ ಕೆ.ಜಿ.ಎಫ್ ಶಾಖೆಯಲ್ಲಿ 2019-20 ನೇ ಸಾಲಿನಲ್ಲಿ ಪಶುಭಾಗ್ಯ ಫಲಾನುಭವಿಗಳ ಹೆಸರಿನಲ್ಲಿ ನಕಲಿ ದಾಖಲೆಗಳನ್ನು ಸೃಷ್ಟಿಸಿ ಸಹಾಯಧನ ವಿತರಣೆಯಲ್ಲಿ ಅವ್ಯವಹಾರ ನಡೆದಿದೆ ಎಂಬ ದೂರಿನ ಬಗ್ಗೆ ಪರಿಶೀಲಿಸಲು ನಿಯೋಜಿಸಲ್ಪಟ್ಟ ಇಲಾಖಾಧಿಕಾರಿ ತಂಡವು ದಾಖಲೆಗಳನ್ನು ಪರಿಶೀಲಿಸಿ, ಫಲಾನುಭವಿಗಳನ್ನು ಸಂದರ್ಶಿಸಿ ವರದಿಯನ್ನು ಸಲ್ಲಿಸಿರುತ್ತಾರೆ. ವರದಿ ರೀತ್ಯ ಪಶುಭಾಗ್ಯ ಯೋಜನೆಯಡಿ ಫಲಾನುಭವಿಗಳಿಗೆ ಚೆಕ್ ಮುಖಾಂತರ ಸಹಾಯಧನದ ಮೊತ್ತವನ್ನು ವಿತರಣೆ ಮಾಡಿದ್ದು, ಅವ್ಯವಹಾರ ನಡೆದಿರುವುದು ಕಂಡು ಬಂದಿರುವುದಿಲ್ಲ. |
| ಇ) | ಕೋಲಾರ ಮತ್ತು ಚಿಕ್ಕಬಳ್ಳಾಪುರ ಡಿ.ಸಿ.ಸಿ ಬ್ಯಾಂಕ್ ನಿ., ಕೋಲಾರ ಇದರ 2020-21 ನೇ ಸಾಲಿನ ಶಾಸನಬದ್ಧ ಲೆಕ್ಕಪರಿಶೋಧನಾ ವರದಿ ಯಾವುದು ವರದಿಯಲ್ಲಿರುವ ನ್ಯೂನತೆಗಳನ್ನು ಕೈಬಿಟ್ಟಿರುವ ಮತ್ತು ಸರಿಪಡಿಸದಿರುವ ಬಗ್ಗೆ (ಸಂಪೂರ್ಣ ಮಾಹಿತಿ ನೀಡುವುದು) | 2019-20ನೇ ಸಾಲಿನ ಬ್ಯಾಂಕಿನ ವಾರ್ಷಿಕ ಸಭೆಯು ಆಯ್ಕೆ ಮಾಡಿರುವಂತೆ ಶ್ರೀ ಚಂದ್ರಶೇಖರಯ್ಯ. ಟಿ.ಜಿ. ಇವರು 2020-21ನೇ ಸಾಲಿನ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959 ಕಲಂ 63 ರಡಿ ಶಾಸನಬದ್ಧ ಲೆಕ್ಕಪರಿಶೋಧನೆ ಕೈಗೊಂಡು ದಿನಾಂಕ: 18.09.2021 ರಂದು ಲೆಕ್ಕಪರಿಶೋಧನಾ ವರದಿಯನ್ನು ಬಿಡುಗಡೆ ಮಾಡಿರುತ್ತಾರೆ.<br><br>ಲೆಕ್ಕಪರಿಶೋಧನಾ ವರದಿಯಲ್ಲಿನ ನ್ಯೂನತೆಗಳಿಗೆ ಬ್ಯಾಂಕ್ ಅನುಪಾಲನಾ ವರದಿಯನ್ನು 2020-21 ನೇ ಸಾಲಿನ ದಿನಾಂಕ:10.11.2021ರಂದು ನಡೆದ ವಾರ್ಷಿಕ ಮಹಾಸಭೆಯಲ್ಲಿ ಅನುಮೋದಿಸಲಾಗಿರುತ್ತದೆ. |
| ಈ) | ಸವೆನ್ ಸ್ಟಾರ್ ಬಳಕೆದಾರರ ಸಹಕಾರ ಸಂಘ ನಿ., ಬಂಗಾರಪೇಟೆ ಇದರ ನೋಂದಣಿಗೆ ಸಂಬಂಧಪಟ್ಟಂತೆ ಸಂಪೂರ್ಣ ಮಾಹಿತಿ ನೀಡುವುದು. ಈ ಸಂಘಕ್ಕೆ ರೂ10.00 ಕೋಟಿಗಳಷ್ಟು ಸಾಲ ಮಂಜೂರು ಮಾಡಿರುವುದು ನಿಜವೇ ಆ ಬಗ್ಗೆ (ಸಂಪೂರ್ಣ ಮಾಹಿತಿ ನೀಡುವುದು) | ಸವೆನ್‌ಸ್ಟಾರ್ ಬಳಕೆದಾರರ ಸಹಕಾರ ಸಂಘ ನಿ., ಕೋಲಾರ ಮುಖ್ಯರಸ್ತೆ, ಬಂಗಾರಪೇಟೆ ಈ ಸಹಕಾರ ಸಂಘವನ್ನು ನೋಂದಣಿ ಮಾಡುವ ಪೂರ್ವ ಸಹಕಾರ ಸಂಘಗಳ ಸಹಾಯಕ ನಿಬಂಧಕರು ಕೋಲಾರ ರವರ ಆದೇಶ ಸಂಖ್ಯೆ: ಎಆರ್.49/ನೋಂದಣಿ/ಸಿಆರ್.13/2019-20 ದಿನಾಂಕ: 18-06-2019 ರಲ್ಲಿ ಷೇರು ಸಂಗ್ರಹಣೆಗೆ ಆದೇಶಿಸಲಾಗಿದ್ದು, ಅದರಂತೆ, ಷೇರು ಸಂಗ್ರಹಿಸಿ ಸಂಘವನ್ನು ನೋಂದಣಿ ಮಾಡಿಕೊಡಲು ಕೋರಿ ದಿನಾಂಕ: 19-06-2019 ರಲ್ಲಿ ಸಂಘದ ಮುಖ್ಯ ಪ್ರವರ್ತಕರು ಕೋರಿಕೆ ಮೇರೆಗೆ ಈ ಸಹಕಾರ ಸಂಘವನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಕೋಲಾರ ರವರ ಆದೇಶ ಸಂಖ್ಯೆ: ನಂ: ಎಆರ್-49/ಆರ್‌ಜಿಎನ್/ಸಿಆರ್-12/ 52439/2019-20 ರೀತ್ಯಾ ದಿನಾಂಕ: 21.6.2019 ರಲ್ಲಿ ನೋಂದಣಿ ಮಾಡಲಾಗಿರುತ್ತದೆ.<br><br>ಬ್ಯಾಂಕಿನಿಂದ ಸವೆನ್ ಸ್ಟಾರ್ ಬಳಕೆದಾರರ ಸಹಕಾರ ಸಂಘ ನಿಯಮಿತ, ಬಂಗಾರಪೇಟೆ. ಈ ಸಂಘಕ್ಕೆ 2019-20ನೇ ಸಾಲಿನಲ್ಲಿ ರೂ.1000.00 ಲಕ್ಷಗಳ ನಗದು ನಂಬಿಕೆ ಸಾಲವನ್ನು ಅಕ್ಕಿ ಮತ್ತು ರಾಗಿ ಪ್ಲೋರ್ ಮಿಲ್ ಉದ್ದಿಮೆ |

| | | |
|---|---|---|
| | | ನಡೆಸಲು ದುಡಿಯುವ ಬಂಡವಾಳಕ್ಕೆ ಮಂಜೂರು ಮಾಡಲಾಗಿದ್ದು, ದಿನಾಂಕ:09.12.2021 ರಂದು ಬ್ಯಾಂಕಿಗೆ ಸಂಪೂರ್ಣವಾಗಿ ಮರುಪಾವತಿಸಿ ಬೇಬಾಕಿ ಪಡೆದಿದ್ದು, ಸಂಘದಿಂದ ಬ್ಯಾಂಕಿಗೆ ಯಾವುದೇ ಸಾಲ ಬಾಕಿ ಇರುವುದಿಲ್ಲ. |
| ಉ) | 2018-19 ನೇ ಸಾಲಿನಲ್ಲಿ ಜಾರಿಯಾಗಿದ್ದ ಘನ ರಾಜ್ಯ ಸರ್ಕಾರದ ರೂ.100000.00 ಗಳ ಮೊತ್ತದ ಕೃಷಿ ಅಲ್ಪಾವಧಿ ಸಾಲ ಮನ್ನಾ ಯೋಜನೆಯಲ್ಲಿ ಅವ್ಯವಹಾರ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಅಂತಹವರ ವಿರುದ್ಧ ಕೈಗೊಂಡಿರುವ ಸರ್ಕಾರದ ಕ್ರಮವೇನು? | 2018-19ನೇ ಸಾಲಿನಲ್ಲಿ ರೈತರಿಗೆ ರೂ.1.00 ಲಕ್ಷಗಳ ಅಲ್ಪಾವಧಿ ಬೆಳೆ ಸಾಲ ಮನ್ನಾ ಯೋಜನೆಯಡಿ ಸರ್ಕಾರ ರೂಪಿಸಿರುವ ಸಾಫ್ಟ್‌ವೇರ್‌ನಲ್ಲಿ ಕ್ಲೈಂ ಸಲ್ಲಿಸಿರುವ, ಸರ್ಕಾರದಿಂದ ಬಿಡುಗಡೆಯಾಗಿರುವ ಮತ್ತು ಬಿಡುಗಡೆಗೆ ಬಾಕಿ ಇರುವ ತಾಲ್ಲೂಕುವಾರು ವಿವರಗಳು ಕೆಳಕಂಡಂತಿರುತ್ತದೆ. |

(ರೂ.ಲಕ್ಷಗಳಲ್ಲಿ)

| ತಾಲ್ಲೂಕಿನ ಹೆಸರು | ರೂ.1.00 ಲಕ್ಷ ಸಾಲ ಮನ್ನಾ ಯೋಜನೆಯಲ್ಲಿ ಕ್ಲೈಂ ಸಲ್ಲಿಸಿರುವ | | ಸರ್ಕಾರದಿಂದ ಬಿಡುಗಡೆಯಾಗಿರುವ | | ಸರ್ಕಾರದಿಂದ ಬಿಡುಗಡೆಗೆ ಬಾಕಿ ಇರುವ | | ಬಿಡುಗಡೆಗೆ ಬಾಕಿ ಇರುವ ಪೈಕಿ ಹಸಿರು ಪಟ್ಟಿಗೆ ಸೇರಿದ ವಿವರ (green list released) | | ತಾಂತ್ರಿಕ ದೋಷದಿಂದ ಹಸಿರು ಪಟ್ಟಿಗೆ ಬರಲು ಬಾಕಿ ಇರುವ ವಿವರ | |
|---|---|---|---|---|---|---|---|---|---|---|
| | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ | ಸಂಖ್ಯೆ | ಮೊತ್ತ |
| ಕೋಲಾರಜಿಲ್ಲೆ | | | | | | | | | | |
| ಕೋಲಾರ | 2981 | 2666.51 | 2943 | 2630.01 | 38 | 36.50 | 35 | 33.60 | 3 | 2.90 |
| ಮಾಲೂರು | 1328 | 1238.76 | 1289 | 1200.36 | 39 | 38.40 | 38 | 37.40 | 1 | 1.00 |
| ಬಂಗಾರಪೇಟೆ | 1335 | 1197.18 | 1326 | 1189.08 | 9 | 8.10 | 7 | 6.45 | 2 | 1.65 |
| ಕೆ.ಜಿ.ಎಫ್. | 1741 | 1621.41 | 1696 | 1576.41 | 45 | 45.00 | 42 | 42.00 | 3 | 3.00 |
| ಮುಳಬಾಗಿಲು | 1622 | 1353.59 | 1600 | 1332.54 | 22 | 21.05 | 19 | 18.05 | 3 | 3.00 |
| ಶ್ರೀನಿವಾಸಪುರ | 948 | 836.00 | 929 | 817.00 | 19 | 19.00 | 18 | 18.00 | 1 | 1.00 |
| ಒಟ್ಟು | 9955 | 8913.44 | 9783 | 8745.39 | 172 | 168.05 | 159 | 155.50 | 13 | 12.55 |

ದಿನಾಂಕ:10.07.2018ಕ್ಕೆ ಹೊರಬಾಕಿ ಇರುವ ಅಲ್ಪಾವಧಿ ಬೆಳೆ ಸಾಲದ ಪೈಕಿ ಒಂದು ಕುಟುಂಬಕ್ಕೆ ಗರಿಷ್ಠ ರೂ.1.00 ಲಕ್ಷದವರೆಗಿನ ಸಾಲವನ್ನು ಮನ್ನಾ ಮಾಡಿ ಸರ್ಕಾರ ಹೊರಡಿಸಿರುವ ಆದೇಶ ಸಂಖ್ಯೆ ಸಿಒ163 ಸಿಎಲ್‌ಎಸ್ 2018, ದಿನಾಂಕ:14.08.2018ರ ಆದೇಶದಲ್ಲಿನ ಷರತ್ತುಗಳನ್ನು ಮತ್ತು ಸಹಕಾರ ಸಂಘಗಳ ನಿಬಂಧಕರು ಕಾಲಕಾಲಕ್ಕೆ ಹೊರಡಿಸಿರುವ ಆದೇಶ/ಸುತ್ತೋಲೆಗಳನ್ನು ಪಾಲನೆ ಮಾಡಿ, ಸರ್ಕಾರ ರೂಪಿಸಿರುವ

| | | |
|---|---|---|
| | | www.parihara.karnataka.gov.in/clws/pacs/ ತಂತ್ರಾಂಶದಲ್ಲಿ ಸಾಲಮನ್ನಾ ಅರ್ಹತೆ ಇರುವ ರೈತರ ಮಾಹಿತಿಯನ್ನು ಅಳವಡಿಸಿದ ನಂತರ ಅರ್ಹ ಫಲಾನುಭವಿಗಳಿಗೆ Direct Benefit Transfer (DBT) ಮೂಲಕ ನೇರವಾಗಿ ರೈತರ ಖಾತೆಗಳಿಗೆ ಸಾಲಮನ್ನಾ ಮೊತ್ತ ಜಮಾ ಆಗಿರುತ್ತದೆ. ಸದರಿ ಯೋಜನೆಯಲ್ಲಿ ಅವ್ಯವಹಾರ ಪ್ರಕರಣ ವರದಿಯಾಗಿರುವುದಿಲ್ಲ. |

**ಕಡತ ಸಂಖ್ಯೆ: ಸಿಒ 334 ಸಿಎಲ್‌ಎಸ್ 2022**

**(ಎಸ್. ಟಿ. ಸೋಮಶೇಖರ್)**
ಸಹಕಾರ ಸಚಿವರು.